**ಡಿ.ಡಬ್ಲೂ-1**

ದಿನಾಂಕ: 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ- ದೂರುದಾರ ಪರ ಶ್ರೀ.ವಿ.ಎಂ.ವಿ ವಕೀಲರಿಂದ ಃ**

1. ನಾನು 10 ತರಗತಿ ವಿಧ್ಯಾಬ್ಯಾಸ ಮಾಡಿದ್ದೇನೆ. ಮೊದಲು ನಾನು ಕಾನಮೆಂಟಗೆ ಕೆಲಸಕ್ಕೆ ಹೋಗುತ್ತಿದ್ದು ರೂ.175/- ಸಂಬಳ ಇತ್ತು ನಂತರ ರೂ.325/- ರೂಪಾಯಿ ಸಂಬಳ ಕೊಡುತ್ತಿದ್ದರು. ನನ್ನ ಗಂಡ ಪಾನಪಟ್ಟಿ ಅಂಗಡಿ ಇಟ್ಟಿದ್ದರು. ನನ್ನ ಗಂಡನ ಹೆಸರಿನಲ್ಲಿ ಜಮೀನು ಇಲ್ಲಾ, ಆದರೆ ಹಿರಿಯರ ಹೆಸರಿನಲ್ಲಿ ಆಸ್ತಿ ಇದೆ. ನನ್ನ ಗಂಡನಿಗೆ ಕಾನ್ಸರ ರೋಗ ಇದ್ದು ಚಿಕಿತ್ಸೆಗಾಗಿ ನಾನು ಫಿರ್ಯಾದಿ ಇಂದ 8 ಲಕ್ಷ ಹಣ ಪಡೆದಿದ್ದೇನು ಎಂದರೆ ಸರಿಯಲ್ಲ. ನಾನು ಮತ್ತು ಫಿರ್ಯಾದಿಯ ಹೆಂಡತಿ 5 ವರ್ಷ ಕೂಡಿ ಕೆಲಸ ಮಾಡಿದ್ದೇವು. ನನ್ನ ಮತ್ತು ಫಿರ್ಯಾದಿ ಮನೆ 100 ಮೀಟರ ಅಂತರದಲ್ಲಿ ಇವೆ. ಫಿರ್ಯಾದಿ ವಿಶೇಷ ಚೇತನ ಎಂದರೆ ನನಗೆ ಗೊತ್ತಿಲ್ಲ. ಫಿರ್ಯಾದಿಯ ಕೋಳಿಫಾರ್ಮ ಇದೆ ಎಂದರೆ ನನಗೆ ಗೊತ್ತಿಲ್ಲ. ಫಿರ್ಯಾದಿ ಮೊದಲು electrical shop ಹೊಂದಿದ್ದು ಅದರಿಂದ ತಿಂಗಳಿಗೆ 1 ಲಕ್ಷ ಆದಾಯ ಇತ್ತು ಎಂದರೆ ನನಗೆ ಗೊತ್ತಿಲ್ಲ.

2. ಫಿರ್ಯಾದಿಯ ಹೆಂಡತಿ ನನಗೆ ಐಯಪ್ಪನ ಜಾತ್ರೆಯಲ್ಲಿ ಭೇಟಿಯಾಗಿ ನನ್ನ ಚೆಕ್ಕಬುಕ್ಕ ತೆಗೆದುಕೊಂಡು ಹೋಗಿದ್ದೇನು ಎಂದು ಹೇಳಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದಿಗೆ ಯಾವುದೇ ಚೆಕ್ಕ ನೀಡಿಲ್ಲ. ನಿಪಿ-1 ಚೆಕ್ಕ ನನಗೆ ಸೇರಿದ್ದು ಆದರೆ ಅದರ ಮೇಲಿರುವ ಸಹಿ ನನ್ನದಲ್ಲ. ನಿಪಿ-7 ರಲ್ಲಿ ಇರುವ ಸಹಿ ನನ್ನದು. ಫಿರ್ಯಾದಿ ನೀಡಿರುವ ಲೀಗಲ ನೋಟಿಸ ನನಗೆ ಮುಟ್ಟಿದೆ. ಸದರಿ ನೋಟಿಸಿಗೆ ನಾನು ಉತ್ತರ ಕೊಟ್ಟಿಲ್ಲ. ಫಿರ್ಯಾದಿಯ ಹೆಂಡತಿ ಚೆಕ್ಕಬುಕ್ಕ ತೆಗೆದುಕೊಂಡ ಹೋದ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿಲ್ಲ. ಫಿರ್ಯಾದಿ ನನಗೆ ನನ್ನ ಗಂಡನ ಚಿಕಿತ್ಸೆಗೆ 4 ಲಕ್ಷ ರೂಪಾಯಿ ಕೊಟ್ಟಿದ್ದು ನಂತರ ನನ್ನ ಗಂಡ ಮೃತಪಟ್ಟ ಮೇಲೆ ತನ್ನ ಜಮೀನು ಮಾರಾಟ ಮಾಡಿ 4 ಲಕ್ಷ ರೂಪಾಯಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಫಿರ್ಯಾದಿ ಹಣ ಮರುಪಾವತಿ ಮಾಡು ಎಂದು ಕೇಳಿದಾಗ

ನಾನು ನಿಪಿ-1 ಚೆಕ್ಕನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಯ 8 ಲಕ್ಷ ರೂಪಾಯಿ ಹಣ ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ. ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ